

# ನಾಗರಿಕರ ದಂಗೆಯ ಪ್ರತೀಕ
# ಫೋರ್‌ಟ್ರೆಕ್ಕರ್ ಸ್ಮಾರಕ

**ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರ ದಬ್ಬಾಳಿಕೆ ವಿರುದ್ಧ 'ಬೊಯೆರ್ಸ್' ನಾಗರಿಕರು ಶುರುಮಾಡಿದ ಮಹಾಚಾರಣದ ಸಾಹಸಗಾಥೆಯ ಕುರುಹೇ 'ಫೋರ್‌ಟ್ರೆಕ್ಕರ್ ಸ್ಮಾರಕ'.**

■ ಕೋಟೂರ್ ಸಂಪತ್

ದಕ್ಷಿಣ ಆಫ್ರಿಕಾದ ರಾಜಧಾನಿ ಪ್ರಿಟೋರಿಯಾದ ದಕ್ಷಿಣಕ್ಕಿರುವ ಗುಡ್ಡದ ತುದಿಯಲ್ಲಿ ಸ್ಥಾಪಿತವಾಗಿದೆ ಈ 'ದ ಫೋರ್‌ಟ್ರೆಕ್ಕರ್' ರಾಷ್ಟ್ರೀಯ ಸ್ಮಾರಕ. 1888ರಲ್ಲಿ ಇದರ ನಿರ್ಮಾಣ ಯೋಜನೆಯ ಚರ್ಚೆ ಆರಂಭಗೊಂಡರೂ, 1937ರಲ್ಲಿ ಕಟ್ಟಡ ಕಾಮಗಾರಿ ಶುರುವಾಗಿ 16 ಡಿಸೆಂಬರ್ 1949ರಲ್ಲಿ ಲೋಕಾರ್ಪಣೆಯಾಯಿತು.

1835ರವರೆಗೂ ದಕ್ಷಿಣ ಪಶ್ಚಿಮದ ತುದಿಯಲ್ಲಿರುವ ಕೇಪ್ ಕಾಲೊನಿಯಲ್ಲಿ (ಕೇಪ್ ಟೌನ್) ದಕ್ಷಿಣ ಆಫ್ರಿಕಾಗೆ ವಲಸೆ ಬಂದು ಮೂಲನಿವಾಸಿಗಳೇ ಆಗಿಹೋಗಿದ್ದರು– ಡಚ್ ಫ್ರೆಂಚ್ ಮತ್ತು ಇತರೆ ಯೂರೋಪಿಯನ್ ಜನರು. ಇವರನ್ನು ಸಂಘಟಿತವಾಗಿ 'ಬೊಯೆರ್ಸ್' (ರೈತಾಪಿ ವರ್ಗ) ಎಂದು ಕರೆಯಲಾಗುತ್ತಿತ್ತು. ಇವರುಗಳೇ ಆಳುತ್ತಿದ್ದಾಗ ಕೇಪ್ ಕಾಲೊನಿ ಶಾಂತಿಯುತವಾಗಿ, ಸುಭಿಕ್ಷವಾಗಿತ್ತು.

1835ರ ನಂತರ ಬ್ರಿಟಿಷರು ಈ ಪ್ರದೇಶವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ತಮಗೆ ಸಾಧಕವಾಗುವಂತೆ ಆಡಳಿತ ಬದಲಾವಣೆಗಳನ್ನು ಮಾಡುತ್ತ ಮೂಲನಿವಾಸಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದರು. ಬ್ರಿಟಿಷರ ದಬ್ಬಾಳಿಕೆ ಸಹಿಸಲಾರದೆ ಮೂಲ 'ಬೊಯೆರ್ಸ್' ಒಕ್ಕೂಟ ನಾಗರಿಕರು 1836ರಿಂದ ಕೇಪ್ ಕಾಲೊನಿ ತೊರೆದು, ಮಧ್ಯ ದಕ್ಷಿಣ ಆಫ್ರಿಕಾ ಪ್ರದೇಶಕ್ಕೆ ಪುನರ್‌ವಲಸೆ ಹೋಗಲು ಶುರು ಮಾಡಿದರು. ಇದನ್ನು 'ಗ್ರೇಟ್ ಟ್ರೆಕ್' (ಮಹಾಚಾರಣ) ಎಂದು ಕರೆದರು.

ಕಡಿದಾದ ಗುಡ್ಡಗಾಡು ಪ್ರದೇಶಗಳ ಮೂಲಕ ಎತ್ತಿನ ಗಾಡಿಗಳಲ್ಲಿ, ಕುದುರೆಗಳ ಮೇಲೆ, ಕಾಲುನಡಿಗೆಯಲ್ಲಿ ಸಾವಿರಾರು ಮೂಲನಿವಾಸಿಗಳು ಹೊಸ ಬದುಕಿನ ಆಸೆ ಹೊತ್ತು ಸಾಗತೊಡಗಿದರು. ಹೀಗೆ ಚಾರಣ ಮಾಡುವವರನ್ನು 'ಫೋರ್‌ಟ್ರೆಕ್ಕರ್ಸ್' (ಮುಂಚೂಣಿಯ ಚಾರಣಿಗರು) ಎಂದು ಕರೆಯಲಾಯಿತು. 'ಬೊಯೆರ್ಸ್' ನಾಗರಿಕರು ಶುರುಮಾಡಿದ ಈ ಮಹಾಚಾರಣದಲ್ಲಿ ಅವರುಗಳು ಅನೇಕ ಅಡೆತಡೆಗಳನ್ನು, ವಿರೋಧಿಗಳನ್ನು, ಸಣ್ಣ ಸಣ್ಣ ಯುದ್ಧಗಳನ್ನು ಎದುರಿಸಬೇಕಾಯಿತು. ಆದರೂ ಛಲ ಬಿಡದೆ ಮುಂದುವರೆದ ಕಾರಣ ಈ ಫೋರ್‌ಟ್ರೆಕ್ಕರ್ಸ್‌ರಿಂದ ನೇರವಾಗಿ ಅನೇಕ ಸ್ವತಂತ್ರ ಗಣರಾಜ್ಯಗಳ ಸ್ಥಾಪನೆಗೆ ಕಾರಣವಾಯಿತು.



ಅವುಗಳೆಂದರೆ ದಕ್ಷಿಣ ಆಫ್ರಿಕಾ ಗಣರಾಜ್ಯ, ಆರೆಂಜ್ ಫ್ರೀ ರಾಜ್ಯ ಮತ್ತು ನಟಾಲಿಯ ಗಣರಾಜ್ಯ. 1835ರಿಂದ ಹಿಡಿದು 1854ರವರೆಗೂ ಸಾಗುತ್ತಲೇ ಇದ್ದ ಈ ಮಹಾಚಾರಣಿಗರ ಸಾಹಸಗಾಥೆಯ ಸ್ಮರಣಾರ್ಥವಾಗಿಯೇ ನಿರ್ಮಿಸಲಾದ ಭವನ 'ದ ಫೋರ್‌ಟ್ರೆಕ್ಕರ್ ಸ್ಮಾರಕ'. ದಕ್ಷಿಣ ಆಫ್ರಿಕಾದ ಹೆಸರಾಂತ ವಾಸ್ತುಶಿಲ್ಪಿ ಗೆರಾರ್ಡ್ ಮೊಯೆರ್ಡಿಕ್ ಇದರ ವಿನ್ಯಾಸಕಾರ.

ಈ ಸ್ಮಾರಕದ ಎತ್ತರ 130 ಅಡಿಗಳಿದ್ದು, 130x130 ಚದರಡಿಯ ತಳಪಾಯದ ಮೇಲೆ ನಿರ್ಮಾಣಗೊಂಡಿದೆ. ಈ ಸ್ಮಾರಕದ ಪೂರ್ಣ ವೆಚ್ಚ ಮೂರು ಲಕ್ಷ ಅರುವತ್ತು ಸಾವಿರ ಪೌಂಡುಗಳನ್ನು ದಕ್ಷಿಣ ಆಫ್ರಿಕಾ ಸರ್ಕಾರವೇ ಭರಿಸಿತು. ಸ್ಮಾರಕದ ಈಶಾನ್ಯ ದಿಕ್ಕಿನಲ್ಲಿ ಇಪ್ಪತ್ತು ಸಾವಿರ ಪ್ರೇಕ್ಷಕರು ಕೂರಬಲ್ಲ ಬಯಲು ರಂಗಮಂದಿರವನ್ನು ನಿರ್ಮಿಸಲಾಯಿತು. ಪ್ರತಿವರ್ಷ ಈ ಸ್ಮಾರಕ ಲೋಕಾರ್ಪಣೆಯಾದ ದಿನ, ಅಂದರೆ ಡಿಸೆಂಬರ್ 16ರಂದು ಸ್ಮಾರಕ ಭವನದ ನಡು ಭಾಗದಲ್ಲಿರುವ ವಿಶೇಷ ಆಕರ್ಷಣೆಯ ಸಮಾಧಿ ಕಲ್ಲಿನ ಮೇಲೆ ಕಟ್ಟಡದ ಮಾಡಿನಿಂದ ಸೂರ್ಯನ ಬೆಳಕು ಬೀಳುವಂತೆ ವಿಶೇಷ ವಿನ್ಯಾಸ ಮಾಡಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in